RNU AIR DHARWAD

FEBRUARY 13, 2026

# AKASHAVANI - DHARWAD

# PRADESH SAMACHARA (KANNADA) 12.00 P.M.

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಇಂದು ವಿಶ್ವ ಬಾನುಲಿ ದಿನ.** ಯುನೆಸ್ಕೋ, 2026 ರ ವಿಶ್ವ ಬಾನುಲಿ ಸಮಾವೇಶವನ್ನು, 'ರೇಡಿಯೋ ಮತ್ತು ಕೃತಕ ಬುದ್ಧಿಮತ್ತೆ' ವಿಷಯದ ಮೇಲೆ, ಕೇಂದ್ರೀಕರಿಸಿದೆ. ಭಾರತದ ಆಕಾಶವಾಣಿ ರೇಡಿಯೊ ಕಾರ್ಯಕ್ರಮಗಳು, ಬಹು ಭಾಷೆಗಳು ಹಾಗೂ ಉಪಭಾಷೆಗಳಲ್ಲಿ ಪ್ರಸಾರವಾಗಿ, ದೇಶದ ಜನಸಂಖ್ಯೆಯ, ಸುಮಾರು ಶೇಕಡ 99 ರಷ್ಟು ಜನರನ್ನು ತಲುಪುತ್ತಿವೆ, ದೇಶದ ವಿವಿಧೆಡೆಗಳಲ್ಲಿರುವ, 528 ಕ್ಕೂ ಹೆಚ್ಚು ಸಮುದಾಯ ರೇಡಿಯೋ ಕೇಂದ್ರಗಳು ದೇಶಾದ್ಯಂತ ತಳಮಟ್ಟದ ಸಮುದಾಯಗಳ ಧ್ವನಿಯಾಗಿವೆ.

<><><>

**ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ** ಮಂಡಳಿಯಿಂದ, ಬೀದರ, ಕಲಬುರಗಿ, ಕೊಪ್ಪಳ, ರಾಯಚೂರು ಜಿಲ್ಲೆಗಳ, ಹದಿಹರೆಯದ, 14 ವರ್ಷದೊಳಗಿನ ಹೆಣ್ಣು ಮಕ್ಕಳಿಗೆ, ಕ್ಯಾನ್ಸರ ನಿರೋಧಕ ಹೆಚ್.ಪಿ.ವಿ ಲಸಿಕೆ ನೀಡಿಕೆಗಾಗಿ, 14 ಕೋಟಿ 5 ಲಕ್ಷ ರೂಪಾಯಿ ಮೀಸಲಿಡಲಾಗಿದೆ. ಬಾಗಲಕೋಟೆ ಕೃಷಿ ವಿಶ್ವವಿದ್ಯಾಲಯದಲ್ಲಿ ಜೀನ್ ಬ್ಯಾಂಕ್ ನಿರ್ಮಾಣಕ್ಕಾಗಿ ಸಚಿವ ಸಂಪುಟ ಸಭೆಯಲ್ಲಿ ಆಡಳಿತಾತ್ಮಕ ಒಪ್ಪಿಗೆ ನೀಡಲಾಗಿದೆ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಖಾತೆ ಸಚಿವ ಹೆಚ್.ಕೆ ಪಾಟೀಲ್ ಹೇಳಿದರು. ಬೆಂಗಳೂರಿನಲ್ಲಿ ಸಂಸದೀಯ ಸಮಿತಿ ಸಭೆಯ ಕುರಿತು ಮಾಹಿತಿ ನೀಡಿದ ಅವರು, ಅನುವಂಶಿಕ ಹಾಗೂ ದೇಶಿ ಕೃಷಿ ತಳಿಗಳ ರಕ್ಷಣೆಯ ನಿಟ್ಟಿನಲ್ಲಿ ಜೀನ್ ಬ್ಯಾಂಕ್ ಸಹಕಾರಿಯಾಗಲಿದೆ ಎಂದರು.

<><><>

**ಬೆಂಗಳೂರು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ,** ಐಪಿಎಲ್ ಪಂದ್ಯಗಳನ್ನು ಆಯೋಜಿಸಲು ಅನುಮತಿ ನೀಡುವ ಮಹತ್ವದ ನಿರ್ಧಾರವನ್ನು ರಾಜ್ಯ ಸಚಿವ ಸಂಪುಟ ಕೈಗೊಂಡಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ ತಿಳಿಸಿದ್ದಾರೆ. ನ್ಯಾಯಮೂರ್ತಿ ಜಾನ್ ಮೈಕೆಲ್ ಡಿ'ಕುನ್ಹಾ ವರದಿಯ ಶಿಫಾರಸುಗಳ ಅನ್ವಯ, ಸೂಕ್ತ ಸುರಕ್ಷತಾ ಕ್ರಮ ಕೈಗೊಳ್ಳಬೇಕು ಎಂಬ ಷರತ್ತಿನೊಂದಿಗೆ ಅನುಮತಿ ನೀಡಲಾಗಿದೆ ಎಂದು ಅವರು ಮಾಹಿತಿ ನೀಡಿದರು.

<><><>

**ಮಂಡ್ಯ ಜಿಲ್ಲೆ ಮೇಲುಕೋಟೆಯ** ಭಗವದ್ ರಾಮಾನುಜ ರಾಷ್ಟ್ರೀಯ ಸಂಶೋಧನಾ ಸಂಸತ್ ಸಂಸ್ಥೆಯಲ್ಲಿರುವ, ತಾಳೆಗರಿ ಹಾಗೂ ಕಾಗದದ 5 ಸಾವಿರದ 100 ಕಟ್ಟುಗಳ ಹಸ್ತಪ್ರತಿಗಳನ್ನು ಗಣಕೀಕರಿಸುವ ಪ್ರಕ್ರಿಯೆ ಭರದಿಂದ ಸಾಗಿದೆ. ಸಂಸ್ಥೆಯ ಮೂಲಕ, ವಿವಿಧ ಭಾಷಾ ಲಿಪಿಗಳಲ್ಲಿರುವ, ಸುಮಾರು 9 ಸಾವಿರದ 900 ಪ್ರಾಚೀನ ಕೃತಿಗಳನ್ನು ಸಂರಕ್ಷಿಸಲಾಗಿದೆ. 1975 ರಲ್ಲಿ ಮೇಲುಕೋಟೆ ಸಂದರ್ಶಿಸಿದ್ದ, ಅಂದಿನ ಉಪ ರಾಷ್ಟ್ರಪತಿ, ಬಿ.ಡಿ.ಜತ್ತಿ ಅವರ ಸಲಹೆಯಂತೆ, 1977 ರಲ್ಲಿ ರಾಜ್ಯ ಸರ್ಕಾರ ಆರಂಭಿಸಿದ, ಸಂಸ್ಕೃತ

ಸಂಶೋಧನಾ ಸಂಸತ್ ಸಂಸ್ಥೆ ಕಾರ್ಯವೈಖರಿ ಬಗ್ಗೆ ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ತಾಳಪತ್ರ ವಿಭಾಗದ ಉಸ್ತುವಾರಿ ಹಾಗೂ ಹಿರಿಯ ಸಂಶೋಧಕ, ಶರಣು ತಿರುನಾರಾಯಣ

<><><>

**ಶರಣು ತಿರುನಾರಾಯಣ ಧ್ವನಿ 38 ಸೆಕೆಂದುಗಳು**

<><><>

**ಉಜ್ಜಯಿನಿಯ, ರಾಜಾ ವಿಕ್ರಮಾದಿತ್ಯನ** "ನ್ಯಾಯದ ಘಂಟೆ"ಯ ವ್ಯವಸ್ಥೆ, ಭಾರತೀಯ ನ್ಯಾಯಾಂಗ ವ್ಯವಸ್ಥೆಯ, ಔನ್ನತ್ಯಕ್ಕೆ ಹಾಗೂ ಘನತೆಗೆ ಸಾಕ್ಷಿ ಎಂದು, ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ, ವಿ.ಶ್ರೀಷಾನಂದ ಹೇಳಿದ್ದಾರೆ. ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದ, ಸರ್ ಸಿದ್ದಪ್ಪ ಕಂಬಳಿ ಕಾನೂನು ಮಹಾವಿದ್ಯಾಲಯದಲ್ಲಿ, ಹಿರಿಯ ನ್ಯಾಯವಾದಿ, ಲಿಂಗೈಕ್ಯ ಐ.ಜಿ. ಹಿರೇಗೌಡರ ಸ್ಮರಣಾರ್ಥ, ದತ್ತಿ ಕಾರ್ಯಕ್ರಮದಲ್ಲಿ, ಮುಖ್ಯ ಅತಿಥಿಯಾಗಿ ಪಾಲ್ಗೊಂಡು, ಮಾತನಾಡಿದರು.

<><><>

**ಹಾವೇರಿಯಲ್ಲಿ ನಾಳೆ, ರಾಜ್ಯ ಸರ್ಕಾರ 1000** ದಿನಗಳನ್ನು ಪೂರೈಸಿದ ಹಿನ್ನೆಲೆ ಸಾಧನಾ ಸಮಾವೇಶ ಹಾಗೂ ವಿವಿಧ ಜಿಲ್ಲೆಗಳ 1 ಲಕ್ಷದ 11 ಸಾವಿರ ಅರ್ಹ ಫಲಾನುಭವಿಗಳಿಗೆ ಹಕ್ಕುಪತ್ರ ವಿತರಣೆ ಕಾರ್ಯಕ್ರಮ ಜರುಗಲಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಸುರಕ್ಷತೆ ದೃಷ್ಟಿಯಿಂದ ಹೆಚ್ಚುವರಿ ಪೊಲೀಸ್ ಸಿಬ್ಬಂದಿ ನಿಯೋಜಿಸಲಾಗಿದ್ದು, 60 ಸಿಸಿಟಿವಿ ಕ್ಯಾಮರಾಗಳನ್ನು ಅಳವಡಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯಶೋಧಾ ವಂಟಗೋಡಿ ತಿಳಿಸಿದ್ದಾರೆ.

<><><>

**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹೊಸಕೋಟೆ** ತಾಲೂಕಿನ ಎಂ.ಸತ್ಯವರ ರಾಷ್ಟ್ರೀಯ ಹೆದ್ದಾರಿಯಲ್ಲಿ ಸಂಭವಿಸಿದ, ಸರಣಿ ಅಪಘಾತದಲ್ಲಿ 7 ಜನರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಬೈಕ್ ಸವಾರ ದೇವನಹಳ್ಳಿ ತಾಲೂಕಿನ ತಿಂಡ್ಲು ಗ್ರಾಮದ ಗಗನ್ ಹಾಗೂ ಕಾರಿನಲ್ಲಿದ್ದ 6 ಜನರು ಮೃತಪಟ್ಟಿದ್ದು, ಬೆಂಗಳೂರು ಕೊತ್ತನೂರು ನಿವಾಸಿಗಳೆಂದು ಗುರುತಿಸಲಾಗಿದೆ. ಘಟನಾ ಸ್ಥಳಕ್ಕೆ ಐಜಿಪಿ ಲಾಭೂ ರಾಮ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಚಂದ್ರಕಾಂತ ಭೇಟಿ ನೀಡಿ ಪರಿಶೀಲಿಸಿದರು.

<><><>

**ಧಾರವಾಡದ, ಶ್ರೀ ಮುದಿಮಾರುತಿ ಓಣಿಯ,** ಮಹಾಶಿವರಾತ್ರಿ ಸುವರ್ಣ ಸಂಗೀತೋತ್ಸವ ಆಚರಣಾ ಸಮಿತಿ, ಇಂದಿನಿಂದ 3 ದಿನಗಳ, ಶ್ರೀ ಶಿವಸ್ಫೂರ್ತಿ ಮಹಾಶಿವರಾತ್ರಿ ಸುವರ್ಣ ಮಹೋತ್ಸವ ಆಯೋಜಿಸಿದೆ. ಸಮಿತಿ ಕಾರ್ಯಾಧ್ಯಕ್ಷ ವೀರಣ್ಣ ಪತ್ತಾರ ಮಾಹಿತಿ ನೀಡಿ, ಇಂದು ಮತ್ತು ನಾಳೆ, ಸಂಜೆ 5 ಗಂಟೆಗೆ, ಆಲೂರು ವೆಂಕಟರಾವ ಸಾಂಸ್ಕೃತಿಕ ಭವನದಲ್ಲಿ, ಸಂಗೀತೋತ್ಸವ ನಡೆಯಲಿದೆ. 15ನೇ ತಾರೀಖು, ಮಹಾ ಶಿವರಾತ್ರಿಯಂದು, ಶ್ರೀ ಮುದಿ ಮಾರುತಿ ದೇವಸ್ಥಾನದಲ್ಲಿ, ಅಹೋರಾತ್ರಿ ಸಂಗೀತೋತ್ಸವ ಹಾಗೂ ಸಾಧಕ ಶಿವ– ಪ್ರಶಸ್ತಿ ಪ್ರದಾನ ಸಮಾರಂಭ ಜರುಗಲಿದೆ ಎಂದರು.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ**

<><><>